ಆ. ರೂ. 1,35,000-00 ಗಳು

ಇ. ಯಾವುದೂ ಪೂರ್ಣವಾಗಿಲ್ಲ.

ಈ. ಸರ್ಕಾರದ ಪರಿಶೀಲನೆಯಲ್ಲಿದೆ.

ಅತಿವೃಷ್ಟಿಯಿಂದ ಬಲಿಯಾದವರಿಗೆ ಪರಿಹಾರ ಧನ

(2104): ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಾದಾಮಿ ತಾಲ್ಲೂಕಿನಲ್ಲಿ ಅನಿರೀಕ್ಷಿತ ಮಳೆಯಿಂದ ಹಾಗೂ ಮಲಪ್ರಭಾ ನದಿಯ ಭಾರಿ ಪ್ರವಾಹದಿಂದ ಆದ ಹಾನಿ ಎಷ್ಟು; (ಬೆಳೆ, ದನಗಳ ಹಾಗೂ ಬಿದ್ದ ಮನೆಗಳ ವಿವರ ಒದಗಿಸುವುದು);

ಆ. ಇಲ್ಲಿಯವರೆಗೆ ನೀಡಲಾಗಿರುವ ಪರಿಹಾರ ಧನವೆಷ್ಟು;

ಇ. ಉಳಿದ ಪರಿಹಾರ ಧನವನ್ನು ಯಾವಾಗ ಬಿಡುಗಡೆ ಮೊದಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಹಾನಿಯ ವಿವರ ಕೆಳಕಂಡಂತೆ ಇದೆ:

	ಅಂದಾಜು ಹಾನಿ (ರೂ. ಲಕ್ಷಗಳಲ್ಲಿ)
1. ಪೂರ್ಣ ಹಾನಿಯಾಗಿರುವ ಮನೆಗಳ ಸಂಖ್ಯೆ 203	44.86
2. ಭಾಗಶಃ ಹಾನಿಯಾಗಿರುವ ಮನೆಗಳ ಸಂಖ್ಯೆ 3853	
3. ಹಾನಿಯಾಗಿರುವ ಜಾನುವಾರುಗಳ ಸಂಖ್ಯೆ 1070	1.45
4. ಬೆಳೆನಾಶ 1655 ಹೆಕ್ಟೇರುಗಳು	79.50
ಒಟ್ಟು:	125.81

ಆ. ನೀಡಲಾದ ಪರಿಹಾರ ಕೆಳಕಂಡಂತಿದೆ:

1. ಮನೆಗಳ ಹಾನಿಗೆ ರೂ.	9,49,280-00
2. ಜಾನುವಾರುಗಳ ಹಾನಿಗೆ ರೂ.	500-00
ಒಟ್ಟು: ರೂ.	9,49,780-00

ಇ. ಆಗತ್ಯಕ್ಕೆ ಅನುಗುಣವಾಗಿ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.